ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 292/2020

ಸಿ ಡಬ್ಲ್ಯೂ-11

ಪಿ ಡಬ್ಲ್ಯೂ- 12

ದಿಃ 01-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಸಿದ್ದೇಶ್ವರ ಹೆಬ್ಬಾಳ

ತಂದೆಯ ಹೆಸರುಃ ನಾಗಪ್ಪ

ವಯಸ್ಸುಃ 51 ವರ್ಷ

ಉದ್ಯೋಗಃ ಮುಖ್ಯ ಯಾಂತ್ರಿಕ ಅಭಿಯಂತರರು.

ವಿಳಾಸಃ ಹುಬ್ಬಳ್ಳಿ

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದಃ

ನಾನು 2018 ನೇ ಸಾಲಿನಲ್ಲಿ ಶಿರಸಿ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ಎನ್ ಡಬ್ಲ್ಯೂಕೆ ಎಸ್ ಆರ್ ಟಿ ಸಿ ನೆದ್ದರಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಚಾಸಾ-1 ರವರು ಪರಿಚಯ ಇದ್ದು, ಅವರು ಅಂಕೋಲಾ ಡಿಪೋ ಮ್ಯಾನೇಜರ್ ಆಗಿದ್ದರು ಎಂದು ನುಡಿಯುತ್ತಾರೆ. ಚಾಸಾ-7 ರವರು ಅಂಕೋಲಾದಲ್ಲಿ ಸಂಚಾರ ಮೇಲ್ವಿಚಾರಕರು ಆಗಿದ್ದರು. ಚಾಸಾ-6 ರವರು ಪಾರು ಪತ್ಯದಾರರ ಆಗಿದ್ದರು. ಎಲ್ಲರೂ ಅಂಕೋಲಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆರೋಪಿಯು ಅಂಕೋಲಾ ಡಿಪೋದಲ್ಲಿ ಚಾಲಕ, ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಈಗ ಆರೋಪಿಯು ಕರ್ತವ್ಯದಲ್ಲಿ ಇರುವುದಿಲ್ಲ. ಸಾಕ್ಷಿಯು ನಿಪಿ-2ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು.

ದಿಃ30-07-2018 ರಂದು ಆರೋಪಿಯ ಅಂಕೋಲಾ ಡಿಪೋದಲ್ಲಿ ಚಾಲಕ ಮತ್ತು ನಿರ್ವಾಹಕರಾಗಿದ್ದರು. ಅವರು ಡಿಪೋ ಮ್ಯಾನ್ಯೇಜರಾದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಮಾರನೇ ದಿನ ಆರೋಪಿಯು ಚಾಸಾ-6 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಅದರ ವರದಿಯನ್ನು ಚಾಸಾ-1 ರವರು ನನಗೆ ಕೊಟ್ಟಿರುತ್ತೇನೆ. ಆ ವರದಿಯ ಮೇರೆಗೆ ನಾನು ಆರೋಪಿಗೆ ಕಾರಣಕೇಳಿ ನೋಟೀಸನ್ನು ಕೊಟ್ಟಿರುತ್ತೇನೆ. ಆರೋಪಿಯ ಕರ್ತವ್ಯ ಮುಗಿಸಿಕೊಂಡು ಡಿಪೋಗೆ ಬಂದಾಗ ಚಾಸಾ-1 ಮತ್ತು 6 ರವರು ಡಿಸೇಲ್ ಎಷ್ಟು ಖರ್ಚಾಗಿರುತ್ತದೆ ಎಂದು ಕೇಳಿದಾಗ ಹಾಗೂ ಕಡಿಮೆ ಕೆ ಎಂ ಪಿ ಎಲ್ ರಲ್ಲಿ ತಂದಿರುತ್ತೀರಿ ಎಂದು ಪ್ರಶ್ನೆ ಮಾಡಿದಾಗ ಆ ಸಮಯದಲ್ಲಿ ಆರೋಪಿಯ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಚಾಸಾ-1 ರವರಿಗೆ ಆರೋಪಿಯ ವಿರುದ್ಧ ಕ್ರಮ ತೆಗೆದುಕುಳ್ಳಲು ಯಾವುದೇ ಅಧಿಕಾರ ಇಲ್ಲದ ಕಾರಣ ನನಗೆ ವರದಿಯನ್ನು ಮಾಡಿದ್ದು, ನಾನು ಆರೋಪಿಗೆ ನೀವು ತರಬೇತಿಯಲ್ಲಿದ್ದು ನಿಮಗೆ ಯಾವ ಕಾರಣಕ್ಕಾಗಿ ಕೆಲಸದಿಂದ ತೆಗೆಯಬಾರದೆಂದು ಕೇಳಿ ನೋಟೀಸನ್ನು ಕೊಟ್ಟಿರುತ್ತೇನೆ. ನಂತರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ಎನ್.ಆರ್.ಎನ್ ಇವರಿಂದಃ

2. ನೀವು ಶಿರಸಿ ಘಟಕದಲ್ಲಿ ಎಲ್ಲಿಂದ ಎಲ್ಲಿಯವರೆಗೆ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತೀರಿ ಎಂದರೆ ಸಾಕ್ಷಿಯು ಎಪ್ರಿಲ್ 2018 ರಿಂದ ನವೆಂಬರ್ 2018 ರವರೆಗೆ ಕಾರ್ಯ ನಿರ್ವಹಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿಃ30-07-2018 ಮತ್ತು 31-07-2018 ರಂದು

ಆರೋಪಿಯು ಬೈದಿರುತ್ತಾನೆ ಎಂದು ಹೇಳುವ ಬಗ್ಗೆ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿಯ ಯಾರಯಾರಿಗೆ ಬೈದಿರುತ್ತಾನೆ ಎಂದು ಕುರಿತ ಬಗ್ಗೆ ಲಿಖಿತವಾಗಿ ವರದಿ ಇತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ಆರೋಪಿಯು ಚಾಸಾ-1 ಮತ್ತು 6 ರವರಿಗೆ ಬೈದಿರುತ್ತಾನೆ ಎಂದು ಹೇಳಿದ ಬಗ್ಗೆ ಲಿಖಿತ ವರದಿಯನ್ನು ನಿಮ್ಮ ಕಚೇರಿಯಲ್ಲಿ ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ. ಕಚೇರಿಯ ಪ್ರತಿಯನ್ನು ಈ ಪ್ರಕರಣದ ತನಿಖಾಧಿಕಾರಿಗಳಿಗೆ ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 6 ರವರು ನೀಡಿರುತ್ತಾರೆ ಎಂಬ ವರದಿಯ ಮೂಲ ಪ್ರತಿಯು ನಿಮ್ಮ ಸುಪರ್ದಿಯಲ್ಲಿ ಇತ್ತು ಎಂದರೆ ಸರಿ. ಚಾಸಾ-1 ಮತ್ತು 6 ರವರಿಗೆ ಆರೋಪಿಯು ದಿಃ30-07-2018 ಮತ್ತು 31-07-2018 ರಂದು ಬೈದಿರುತ್ತಾರೆ ಎಂದು ಯಾವುದೇ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾರು ವರದಿಯನ್ನು ನೀಡಿದ್ದಾರೆ ಎನ್ನುವುದರ ಮೇರೆಗೆ ಮಾತ್ರ ನೀವು ಆರೋಪಿಗೆ ಕಾರಣಕೇಳಿ ನೋಟೀಸು ಕೊಟ್ಟಿರುತ್ತೀರಿ ಬದಲಾಗಿ ಸ್ಥಳಕ್ಕೆ ಬಂದು ತನಿಖೆ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಸರಿ. ಚಾಸಾ-1 ಮತ್ತು 6 ರವರು ನಿಮ್ಮ ಅಧೀನ ಅಧಿಕಾರಿಗಳು ಎಂದರೆ ಸರಿ. ಘಟನೆಯಯಿತು ಎನ್ನುವ ಸಂದರ್ಭದಲ್ಲಿ ನಿಮ್ಮ ಅಧೀನ ಅಧಿಕಾರಿಗಳಾದ ಚಾಸಾ-1 ಮತ್ತು 6 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ನೋಟೀಸನ್ನು ಈ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿ ಮಾಡಿ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ವರದಿಯನ್ನು ಯಾವ ದಿನಾಂಕದಂದು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆಗಸ್ಟ ಮೊದಲನೇ ವಾರದಲ್ಲಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಸಾಕ್ಷಿಯನ್ನು

ನುಡಿಯಲು ಬರುವ ಪೂರ್ವದಲ್ಲಿ ವರದಿಯನ್ನು ಹಾಗೂ ನೀವು ನೀಡಿದ ನೋಟೀಸು ಎನ್ನುವ ದಾಖಲಾತಿಯನ್ನು ನೋಡಿಕೊಂಡು ಬಂದಿರುತ್ತೀರಿ ಎಂದರೆ ಸರಿ. ಹಾಗಾಗಿ ಅವುಗಳ ದಿನಾಂಕಗಳನ್ನು ಹೇಳಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ವರದಿಯನ್ನು ನೋಡಿರುತ್ತೇನೆ, ಆಗಸ್ಟ ಮೊದಲನೇ ವಾರದಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಘಟನೆಗೆ ಪೂರಕವಾಗುವ ಹಾಗೆ ಬೇರೆ ಯಾವುದಾದರೂ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಕೊಟ್ಟಿರುತ್ತೇನೆ ಎಂದು ಹೇಳುವ ನೋಟೀಸಿನಲ್ಲಿ ಆರೋಪಿಯ ಕರ್ತವ್ಯ ತಡೆಯುವ ಆದೇಶ ಇರಲಿಲ್ಲ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿಗೆ ಮೊದಲು ಕಾರಣ ಕೇಳಿ ನೋಟೀಸನ್ನು ನೀಡಿ ನಂತರ ಆತನ ವಿರುದ್ಧ ಇಲಾಖಾ ವಿಚಾರಣೆ ಮಾಡಿದ ನಂತರ ಆತನನ್ನು ಕೆಲಸದಿಂದ ತೆಗೆದುಹಾಕಲಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯು ತರಬೇತಿಯಲ್ಲಿ ಇದ್ದಿದ್ದ ಕಾರಣ ಯಾವುದೇ ಇಲಾಖಾ ವಿಚಾರಣೆ ಮಾಡದೇ ತೆಗೆಯುವ ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಕೊಟ್ಟಿರುತ್ತೇನೆ ಎಂದು ಹೇಳುವ ನೋಟೀಸಿನಲ್ಲಿ ಆರೋಪಿಯನ್ನು ಕೆಲಸದಿಂದ ತೆಗೆದು ಹಾಕಿದ ಆದೇಶ ಇರಲಿಲ್ಲ ಎಂದರೆ ಸರಿ. ಚಾಸಾ–1 ಮತ್ತು 6 ರವರು ನಿಮ್ಮ ಅಧೀನ ಅಧಿಕಾರಿಯಾಗಿದ್ದರಿಂದ ಹಾಗೂ ನೀವು ಅವರ ಮೇಲಾಧಿಕಾರಿಯಾಗಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗೂ ನಿಮ್ಮ ಇಲಾಖೆಗೆ ಸಂಬಂಧಪಟ್ಟ ಪ್ರಕರಣವಾಗಿದ್ದರಿಂದ ಈ ಪ್ರಕರಣಕ್ಕೆ ಪೂರಕವಾಗುವಂತೆ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಈಗ ಗುರುತಿಸಿದ್ದೇನೆ ಎಂದು ಹೇಳುವ ದಾಖಲೆಯನ್ನು ಕೇವಲ ಈ ಪ್ರಕರಣಕ್ಕೆ ಸೃಷ್ಟಿ ಮಾಡಿಕೊಂಡ ದಾಖಲೆಯಾಗಿದ್ದು,

ಆರೋಪಿಯು ಯಾವುದೇ ಕಾಲದಲ್ಲೂ ಸಹ ನೀವು ಹೇಳಿದಂತಹ ಘಟನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ದಿಃ30-07-2018 ಮತ್ತು 31-07-2018 ರಂದು ಚಾಸಾ-1 ಮತ್ತು 6 ರವರಿಗೆ ಬೈದಿರುತ್ತಾರೆ ಎಂದು ಹೇಳುವುದರ ಕುರಿತು ನಿಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆರೋಪಿಯು ಕರ್ತವ್ಯವನ್ನು ಮುಗಿಸಿ ಬಂದಾಗ ಕೆ ಎಂ ಪಿ ಎಲ್ ವಿಚಾರವಾಗಿ ಗಲಾಟೆಯಾಗಿರುತ್ತದೆ ಎಂದೂ ಸಹ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ನೀವು ಎಷ್ಟು ಪ್ರಕರಣಗಳಲ್ಲಿ ಸಾಕ್ಷಿ ನುಡಿದಿದ್ದೀರಿ ಎಂದರೆ ಸಾಕ್ಷಿಯು ಸಾಕಷ್ಟು ಪ್ರಕರಣಗಳಲ್ಲಿ ನುಡಿದಿದ್ದೇನೆ ಎಂದು ನುಡಿಯುತ್ತಾರೆ. ಅದರ ಅನುಭವದಿಂದ ನೀವು ಸೃಷ್ಟಿ ಮಾಡಿಕೊಂಡ ಸುಳ್ಳು ನೋಟಿಸಿನ ಆಧಾರದ ಮೇರೆ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳುವಂತಹ ಘಟನೆ ದಿಃ30-07-2018 ಮತ್ತು 31-07-2018 ರಂದು ನಡೆದಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1, 6 ಮತ್ತು 7 ರವರಿಗೆ ಡ್ಯೂಟಿ ರಜಿಸ್ಟರ್ ಇರುತ್ತಾ ಎಂದರೆ ಸಾಕ್ಷಿಯು ಡ್ಯೂಟಿ ರಜಿಸ್ಟರ್ ಇರುವುದಿಲ್ಲ, ಹಾಜರಾತಿ ಪುಸ್ತಕ ಇರುತ್ತದೆ ಎಂದು ನುಡಿಯುತ್ತಾರೆ. ಅವರು ಕರ್ತವ್ಯಕ್ಕೆ ಹಾಜರಾಗಿದ್ದಾರೆ ಎನ್ನುವುದನ್ನು ಹಾಜರಾತಿಯ ಪುಸ್ತಕದ ಆಧಾರದ ಮೇರೆಗೆ ದೃಢೀಕರಿಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ .

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.